# ಅಮ್ಮನ ಪ್ರಿಯಕರ!



**ಯಾವ ಹಣೆಪಟ್ಟಿಯನ್ನೂ ಹಚ್ಚದೆ ತರುಣನೊಬ್ಬನ ವರ್ತನೆ, ಅದರ ಪರಿಣಾಮವನ್ನು ಸೆರೆಹಿಡಿಯಲು ಯತ್ನಿಸಿರುವುದು 'ಟಾಂಟ್ರುಮ್ಸ್' ಕಿರುಚಿತ್ರದ ಘನತೆಯನ್ನು ಹೆಚ್ಚಿಸಿದೆ.**

■ ಗೌರಿ

ಹಾರರ್ ಸಿನಿಮಾ ಅಂದಾಕ್ಷಣ ನಮ್ಮ ಮನಸಿಗೆ ಬರುವುದು ದೆವ್ವದ ಅಕರಾಳ ವಿಕರಾಳ ಚಿತ್ರಗಳು. ಪಾಳು ಮನೆ, ನಡುರಾತ್ರಿಯ ವಿಚಿತ್ರ ಶಬ್ದ, ಬಿಳಿ ಸೀರೆ ಉಟ್ಟ ಹೆಣ್ಣು, ಗೆಜ್ಜೆ ಸದ್ದು ಹೀಗೆ ಕೆಲವು ಟಿಪಿಕಲ್ ದೃಶ್ಯಗಳೇ ಅವುಗಳನ್ನು ಇಂದಿಗೂ ಆಳುತ್ತಿವೆ. ಇನ್ನು ಥ್ರಿಲ್ಲರ್ ಎಂದರೂ ಅಷ್ಟೇ, ಮರಣದ ಕತ್ತಿಯ ಅಂಚಿನ ಮೇಲೆ ಬದುಕುತ್ತಾನೋ ಇಲ್ಲವೋ ಎಂಬಂತೆ ನಡೆಯುವ ನಡಿಗೆಯೇ ಥ್ರಿಲ್ಲರ್ ಎಂಬ ಭಾವ ಇದೆ. ಆದರೆ ಈ ಹಾರರ್ ಮತ್ತು ಥ್ರಿಲ್ಲರ್ ಎರಡೂ ಭಾವಗಳು ನಮ್ಮ ಅನುದಿನದ ಬದುಕಿನ ಕಥೆಗಳಲ್ಲಿಯೂ ಹಾಸುಹೊಕ್ಕಾಗಿರುತ್ತದಲ್ಲವೇ? ಇದನ್ನೇ ಗಮನದಲ್ಲಿಟ್ಟುಕೊಂಡು ಮಾಡಿದ ಹಾಗಿದೆ 'ಟಾಂಟ್ರುಮ್ಸ್' ಕಿರುಚಿತ್ರ.

ಈ ಕಿರುಚಿತ್ರದಲ್ಲಿನ ಕತೆಯ ಎಳೆ ತೀರಾ ಸರಳವಾದದ್ದು ಮತ್ತು ನಾವೆಲ್ಲರೂ ಹಲವು ಸಲ ನೋಡಿರುವಂಥದ್ದೇ.

ಅಮ್ಮ ಅವಳ ಗೆಳೆಯನನ್ನು ಮನೆಗೆ ಕರೆತಂದಿದ್ದಾಳೆ. ಅವನು ಇಲ್ಲಿಯೇ ಉಳಿದುಕೊಳ್ಳುವ ನಿರ್ಧಾರವಾಗಿದೆ. ಆದರೆ ಈಗಷ್ಟೇ ಹರೆಯಕ್ಕೆ ಬರುತ್ತಿರುವ ಮಗನಿಗೆ ಅವನನ್ನು ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಷ್ಟೇ ಇದರ ಕಥೆ. ಹೀಗೆ ಅಮ್ಮನ ಪ್ರಿಯಕರನನ್ನು ಒಪ್ಪಿಕೊಳ್ಳಲಾಗದೆ ಒದ್ದಾಡುವ ಮಕ್ಕಳ ಚಡಪಡಿಕೆಯನ್ನು ಕಾಣಿಸುವ ಹಲವು ಸಿನಿಮಾಗಳು ಈಗಾಗಲೇ ಬಂದಿವೆ. ಆದರೆ ಅದೇ ಹಳೆಯ ಎಳೆಯನ್ನು ದೃಶ್ಯಗಳು ಮತ್ತು ಭಾವತೀವ್ರತೆಯಿಂದ ಹೊಸತಾಗಿ ಕಾಣುವಂತೆ ಮಾಡುತ್ತಾರೆ ನಿರ್ದೇಶಕರು.

ಒಬ್ಬ ಮಾನಸಿಕವಾಗಿ ಪ್ರಕ್ಷುಬ್ಧನಾಗಿರುವ ಹುಡುಗನ ಚಿತ್ರದೊಂದಿಗೇ ಈ ಕಿರುಚಿತ್ರ ಪ್ರಾರಂಭವಾಗುತ್ತದೆ. ಅವನು ಕ್ಯಾನ್‌ನಲ್ಲಿದ್ದ ಜ್ಯೂಸ್ ಕುಡಿಯುತ್ತಿದ್ದಾನೆ. 'Its fucking slap in the face' ಎಂದು ಪದೇ ಪದೇ ಹೇಳಿಕೊಳ್ಳುತ್ತಿದ್ದಾನೆ. ಹಾಗೆಯೇ ಕೈಲಿದ್ದ ಜ್ಯೂಸ್ ಅನ್ನು ಬಚ್ಚಲ ಸಿಂಕ್‌ನಲ್ಲಿ ಚೆಲ್ಲಿಬಿಡುತ್ತಾನೆ.



**ಹೆಸರು:** ಟಾಂಟ್ರುಮ್ಸ್
**ನಿರ್ದೇಶನ:** ಝುಂಡರ್ ಕೋಟ್
**ನಿರ್ಮಾಣ:** ಪೆಂಟಿಯಾ ಫಡೇರಿ, ಸ್ಟೀಫನ್ ಬುಚಾನಾನ್
**ಸಂಕಲನ:** ರೆಕ್ಸ್ ಲೊವ್ರಿ
**ತಾರಾಗಣ:** ಕ್ರಿಶ್ ಅವೆಡಿಸಿಯನ್, ಟ್ರೆನ್ ಮಿಲ್ಲರ್, ಗ್ರಹಾಂ ವಿನೆಸ್

ಅವನು ಯಾವುದನ್ನೂ ಒಡೆಯುವುದಿಲ್ಲ, ಯಾರಿಗೂ ಹೊಡೆಯುವುದಿಲ್ಲ. ಬದಲಿಗೆ ಹರಿತವಾದ ಬ್ಲೇಡ್‌ನಿಂದ ಕೊಯ್ದ ಹಾಗೆ ಭಾಸವಾಗುವ ಅವನ ಮಾತುಗಳೇ ಅವನ ಅಮ್ಮನನ್ನು ದಿಕ್ಕೆಡಿಸುತ್ತವೆ. ಅವಳ ಪ್ರಿಯಕರನನ್ನು ಚುಚ್ಚುತ್ತವೆ.

ತಾನೇ ಚೆಲ್ಲಿದ ಜ್ಯೂಸ್ ಅನ್ನು ಅಮ್ಮನ ಪ್ರಿಯಕರನೇ ಖಾಲಿ ಮಾಡಿದ್ದಾನೆ ಎಂದು ಮಗ ಹೇಳುತ್ತಾನೆ. ಅದಕ್ಕೆ ಅವನನ್ನು ಒಪ್ಪಿಸಿ ಕ್ಷಮೆ ಕೇಳುವ ಹಾಗೆ ಮಾಡುತ್ತಾನೆ ಕೂಡ. ಇದು ಮಗ ಅಮ್ಮನ ಪ್ರಿಯಕರನ ಮೇಲೆ ಸೇಡು ತೀರಿಸಿಕೊಳ್ಳುವ ಕ್ರಮ.

ಮಗ ಮಾನಸಿಕವಾಗಿ ಡಿಸ್ಟರ್ಬ್ ಆಗಿದ್ದಾನೆ. ಅವನಿಗೆ ಮಾನಸಿಕ ಕಾಯಿಲೆ ಇರಬಹುದು ಎಂದು ಚಿತ್ರ ನೋಡುತ್ತಿರುವ ನಮಗೆ ದಟ್ಟವಾಗಿಯೇ ಅನಿಸುತ್ತದೆ. ಆದರೆ ನಿರ್ದೇಶಕರು ಎಲ್ಲಿಯೂ ಅದನ್ನು ಬಾಯಿಬಿಟ್ಟು ಹೇಳುವುದಿಲ್ಲ. ಮನುಷ್ಯನ ನೋವಿಗೆ, ಅದನ್ನು ಅವನು ವ್ಯಕ್ತಪಡಿಸುವ ರೀತಿಗೆ, ಅವನ ವರ್ತನೆಗೆ, ಕೊನೆಗೆ ಸಾವಿಗೂ ಮಾನಸಿಕ ಕಾಯಿಲೆಯ ಟ್ಯಾಗ್ ಅಂಟಿಸುವ ಚಟವೊಂದು ಹೊಸದಾಗಿ ಬೆಳೆದಿದೆ. ಅದೊಂದು ಬಗೆಯಲ್ಲಿ ನನಗೆ ಪ್ರೀತಿಯಾಗಿದೆ ಎಂದು ಹೇಳುವ ಬದಲಾಗಿ ಮಿದುಳಿನಲ್ಲಿ ನಿನ್ನ ನೋಡಿದ ಕೂಡಲೇ ಈ ರಸಗ್ರಂಥಿಗಳು ಸ್ರವಿಸಿ, ಇಂಥ ಪರಿಣಾಮವನ್ನು ಉಂಟುಮಾಡಿ, ನನಗೆ ಹೀಗೆ ಅನಿಸುವ ಹಾಗೆ ಮಾಡಿದೆ ಎಂದು ಹೇಳಿದ ಹಾಗೆ. ಈ ವೈಜ್ಞಾನಿಕ ವಿಶ್ಲೇಷಣೆ ಅತ್ತ ಪ್ರೇಮದ ಗಾಢತೆಯನ್ನೂ ಹೇಳುವುದಿಲ್ಲ, ಇತ್ತ ಪ್ರೇಮದ ಅನುಭವವನ್ನೂ ಕೊಡುವುದಿಲ್ಲ. ಇಲ್ಲಿ ನಿರ್ದೇಶಕರು ಅಂಥ ಪ್ರಯತ್ನಕ್ಕೆ ಇಳಿಯದೇ ಅವನನ್ನು ಒಬ್ಬ ಮನುಷ್ಯ ಅಂತಲೇ ನೋಡಿ, ಅವನ ವರ್ತನೆ, ಅದರ ಪರಿಣಾಮವನ್ನು ಸೆರೆಹಿಡಿಯಲು ಯತ್ನಿಸಿರುವುದು ಈ ಕಿರುಚಿತ್ರದ ಘನತೆಯನ್ನು ಹೆಚ್ಚಿಸಿದೆ.

ಕೊನೆಯಲ್ಲಿ ತನ್ನ ಸೆಡವಿನ ನಡೆಯಲ್ಲಿಯೇ ಅಚಾನಕ್ಕಾಗಿ ಅಮ್ಮನ ಪ್ರಿಯಕರನನ್ನು ಗುಂಡು ಹೊಡೆದು ಸಾಯಿಸಿಬಿಡುತ್ತಾನೆ. ನಂತರ ಅಮ್ಮನ ಬಳಿ 'ಇದೊಂದು ಆಕಸ್ಮಿಕ, ನಾನೇನೂ ಮಾಡಿಲ್ಲ' ಎಂದು ಬಿಕ್ಕಿ ಬಿಕ್ಕಿ ಅಳುತ್ತಾನೆ. ಅವನೊಳಗೆ ತಣ್ಣಗೆ ಕೂತಿದ್ದ ಕ್ರೌರ್ಯ ತನ್ನ ನಖವನ್ನು ಹೊರಚಾಚಿದಾಗ ನಿಜಕ್ಕೂ ಬೆಚ್ಚಿಬೀಳುವಂತಾಗುತ್ತದೆ. ಇದಲ್ಲವೇ ನಿಜವಾದ ಹಾರರ್?

ಪಾತ್ರಗಳ ಭಾವಗಳನ್ನು ಉದ್ದೀಪಿಸುವ ದೃಶ್ಯ ಸಂಯೋಜನೆ, ಅಗತ್ಯಕ್ಕೆ ಬೇಕಾದಷ್ಟೇ ಮಾತುಗಳು, ಕಾಡುವ ಮಾತುಗಳ ನಡುವಿನ ಮೌನ ಎಲ್ಲವೂ ಈ ಚಿತ್ರದ ಮೂಲ ಉದ್ದೇಶಕ್ಕೆ ಪೂರಕವಾಗಿ ದುಡಿದಿವೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3sF0JIa ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.